ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ 2000-01ನೇ ಸಾಲಿಗೆ ವೈಯಕ್ತಿಕ ಕೊಳವೆಬಾವಿ ನೀರಾವರಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ 700 ಹಾಗೂ ಪರಿಶಿಷ್ಟ ವರ್ಗಕ್ಕೆ 195 ಗುರಿಯನ್ನು ಹಾಗೂ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಗೆ 192 ಪರಿಶಿಷ್ಟ ವರ್ಗಕ್ಕೆ 70 ಕೊಳವೆಬಾವಿಗಳನ್ನು ಕೊರೆಯುವ ಗುರಿಯನ್ನು ಹೊಂದಲಾಗಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2000-01ನೇ ಸಾಲಿಗೆ ಹಿಂದುಳಿದ ವರ್ಗಗಳಿಗಾಗಿ 310 ವೈಯಕ್ತಿಕ ನೀರಾವರಿ ಘಟಕಗಳನ್ನು ಹಾಗೂ ಗಂಗಾ ಕಲ್ಯಾಣ ಯೋಜನೆಯಲ್ಲಿ 65 ಸಾಮೂಹಿಕ ನೀರಾವರಿ ಘಟಕಗಳನ್ನು ನಿಗಧಿಪಡಿಸಿದ್ದು, ಸದರಿ ಯೋಜನೆಗೆ 400.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ವೈಯಕ್ತಿಕ ನೀರಾವರಿ ಯೋಜನೆಯಡಿಯಲ್ಲಿ ಕ್ಷೇತ್ರವಾರು ಗುರಿ ನಿಗಧಿಪಡಿಸಲಾಗಿದ್ದು, ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಗುರಿ ಕಡಿಮೆ ಇರುವುದರಿಂದ ಜಿಲ್ಲಾವಾರು ಗುರಿ ನಿಗಧಿಪಡಿಸಲಾಗಿದೆ.

ಇ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಗುರಿಯನ್ನು ಕ್ಷೇತ್ರವಾರು ಹಂಚಿಕೆಯಾಗಿರುವುದಿಲ್ಲ. ಸಂಪನ್ಮೂಲವನ್ನು ಅವಲಂಬಿಸಿ ಆಯಾ ಜಿಲ್ಲೆಯ ಜನಸಂಖ್ಯೆಯನ್ನಾಧರಿಸಿ ಜಿಲ್ಲಾವಾರು ಗುರಿಯನ್ನು ನಿಗಧಿಪಡಿಸಲಾಗಿದೆ.

ಈ) ಗಂಗಾ ಕಲ್ಯಾಣ ಯೋಜನೆಗೆ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನವನ್ನು ಆಯಾ ಜಿಲ್ಲೆಯ ಪರಿಶಿಷ್ಟ ಜಾತಿ, ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಜನಸಂಖ್ಯೆಯನ್ನು ಮಾನದಂಡವನ್ನಾಗಿ ಇಟ್ಟುಕೊಂಡು ಗುರಿ ನಿಗಧಿಪಡಿಸಲಾಗಿದೆ.

ಉ) ಪ್ರಸ್ತುತ ನಿಗಧಿಪಡಿಸಿರುವ ಗುರಿ ಅನ್ವಯ ನೀರು ಲಭ್ಯವಿರುವ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಮೈಸೂರು ನಗರಪಾಲಿಕೆಗೆ ದಸರಾ ನಿಧಿ.

3424(4494) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರಪಾಲಿಕೆಗೆ ಈ ಸಾಲಿನ ದಸರಾ ನಿಧಿಯಾಗಿ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ ;

ಆ) ಈ ಹಣವನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಈ ಸಾಲಿನಲ್ಲಿ ರೂ. 50.00 ಲಕ್ಷ ಹಣವನ್ನು ಸರ್ಕಾರ ಬಿಡುಗಡೆ ಮಾಡಿದೆ.

ಆ) ವಿದ್ಯುಚ್ಛಕ್ತಿ ದುರಸ್ಥಿ ಸಲಕರಣೆಗಳನ್ನು ಮತ್ತು ಕಸದ ತೊಟ್ಟಿಗಳನ್ನು ಖರೀದಿಸಲು ಇಲ್ಲಿಯವರೆವಿಗೂ ರೂ. 7,56,664-00 ಗಳನ್ನು ಖರ್ಚು ಮಾಡಲಾಗಿದೆ.

ಮೈಸೂರು ಮಹಾನಗರಪಾಲಿಕೆ ಚುನಾವಣೆಗೆ ವಾರ್ಡ ಮೀಸಲಾತಿ

3425(4495) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ಮಹಾನಗರಪಾಲಿಕೆ ಚುನಾವಣೆ ಸಮೀಪಿಸುತ್ತಿದ್ದು ಈ ಹಿನ್ನೆಲೆಯಲ್ಲಿ ವಾರ್ಡ್‌ಗಳಲ್ಲಿನ ಹಾಲಿ ಮೀಸಲಾತಿ ಬದಲಾವಣೆ ಮಾಡಲಾಗುವುದೇ?

ಆ) ಹಾಗಿದ್ದಲ್ಲಿ ಇದಕ್ಕೆ ಯಾವ ರೀತಿಯ ಮಾನದಂಡವನ್ನು ಅನುಸರಿಸಲಾಗುವುದು.

ಇ) ಮೀಸಲಾತಿ ಬದಲಾವಣೆ ಸಂದರ್ಭದಲ್ಲಿ ಆಯಾ ಕ್ಷೇತ್ರದ ಶಾಸಕರ ಜೊತೆ ಸಮಾಲೋಚಿಸಲಾಗುವುದೇ?

ಈ) ಈ ಪ್ರಕ್ರಿಯೆ ಪ್ರಾರಂಭವಾಗುವುದು ಯಾವಾಗ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಕಲಂ 7ನ್ನು ಪರಿಗಣಿಸಿ ಮಾಡಲಾಗುವುದು.

ಇ) ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಕಲಂ 7(4) ಉಪ ಬಂಧದನ್ವಯ ಕ್ರಮ ಕೈಗೊಳ್ಳಲಾಗುವುದು.

ಈ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.